ಕಥೆ

# ನೀನು ಕಥೆಯೊಳಗೋ, ಕಥೆಯು ನಿನ್ನೊಳಗೋ




## ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ

ಕಲೆ: ವಿ.ಎಂ. ಮಂಜುನಾಥ್


ಪ್ರಸಿದ್ಧ ಕಥೆಗಾರರಾದ 'ಜಿಗಣೆ ಕುಮಾರ್' ಅಲಿಯಾಸ್ 'ಜಿಗಣೆ'ಯವರು ತಾವು ಬರೆಯಬೇಕಾಗಿರುವ ಕಥೆಯ ನಾಯಕನನ್ನು ಭೇಟಿ ಮಾಡಿದ್ದು ಅಷ್ಟೇನೂ ಒಳ್ಳೆಯ ಸ್ಥಳದಲ್ಲಿ ಅಲ್ಲ. ತಾವು ಬರೆಯುವ ಕಥೆಯಲ್ಲಿ ನಾಯಕ-ನಾಯಕಿಯರನ್ನು ಪಾರ್ಕಿನಲ್ಲೋ, ಗ್ರಂಥಾಲಯದಲ್ಲೋ ಭೇಟಿ ಮಾಡಿಸುವ ಇವರು ತಮ್ಮ ಕಥಾನಾಯಕನನ್ನು ಮಾತ್ರ ಬೀದಿಯ ಕೊನೆಯಲ್ಲಿರುವ ಗಬ್ಬುನಾತ ಬೀರುವ, ಉಂಡಾಡಿ ನಾಯಿಗಳ ಅಡ್ಡೆಯಾಗಿರುವ ದೊಡ್ಡ ಕಸದ ತೊಟ್ಟಿಯ ಹತ್ತಿರ ಭೇಟಿ ಮಾಡಬೇಕಾಗಿ ಬಂದದ್ದು ದೈವಸಂಕಲ್ಪವೆಂದು ಹೇಳಲಾಗದಿದ್ದರೂ ಆಕಸ್ಮಿಕವೆಂದು ಹೇಳಬಹುದು. ಕಥೆಗಾರನು ತನ್ನ ಕಥೆಗಳಲ್ಲಿನ ಸನ್ನಿವೇಶಗಳನ್ನು ಮತ್ತು ಪಾತ್ರಗಳನ್ನು ತನಗಿಷ್ಟ ಬಂದಂತೆ ನಿರ್ದೇಶಿಸಬಲ್ಲನೇ ಹೊರತು, ನಿಜ ಜೀವನದಲ್ಲಿ ತನಗೆ ತೋಚಿದಂತೆ ಸನ್ನಿವೇಶಗಳನ್ನು ಸೃಷ್ಟಿಮಾಡಲು ಸಾಧ್ಯವೇ? ಅದೂ ಅಲ್ಲದೆ ಸ್ವತಃ ಕಥೆಗಾರ ಜಿಗಣೆಯವರಿಗೂ ಕಸದ ತೊಟ್ಟಿಯ ಹತ್ತಿರ ನಾರಾಯಣನನ್ನು ಭೇಟಿ ಮಾಡುವವರೆಗೆ ಈತನೇ ತನ್ನ ಕಥೆಯ ನಾಯಕನಾಗುತ್ತಾನೆಂಬ ಸುಳಿವೇ ಇರಲಿಲ್ಲ. ನೀವು ನಿಯತಕಾಲಿಕೆಗಳನ್ನು ಹಾಗೂ ಕಥೆಗಳನ್ನು ಓದುವವರಾಗಿದ್ದರೆ ಜಿಗಣೆ ಕುಮಾರ್ ಹೆಸರನ್ನು ಕೇಳಿರುತ್ತೀರಿ. ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ ಮುಗಿಸಿ ಅಲ್ಲಿಯೇ ಇಂಗ್ಲಿಷ್ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಈಗ ಒಮಾನ್ ದೇಶದ ಮಸ್ಕತ್ತಿನ ಕಾಲೇಜೊಂದರಲ್ಲಿ ಕೆಲಸ ಸಿಕ್ಕಿ, ಅಲ್ಲಿಗೆ ಸ್ಥಳಾಂತರಗೊಂಡಿದ್ದರು.

ಸಾಹಿತ್ಯದಲ್ಲಿ ಕುಮಾರ್‌ಗೆ ಬಹಳ ಆಸಕ್ತಿಯಿದ್ದುದರಿಂದ ವಿದ್ಯಾರ್ಥಿ ದೆಸೆಯಲ್ಲೇ ಕವನ, ಕಥೆಗಳನ್ನು ಪತ್ರಿಕೆಗಳಲ್ಲಿ ಹಾಗೂ ನಿಯತಕಾಲಿಕೆಗಳಲ್ಲಿ ಬರೆಯುತ್ತಾ, ಉಪನ್ಯಾಸಕರಾದ ಮೇಲೆ ಇನ್ನಷ್ಟು ಪ್ರಬುದ್ಧ ಕಥೆಗಳನ್ನು ಬರೆದು, ಸಾಹಿತ್ಯ ಕ್ಷೇತ್ರದಲ್ಲಿ ತಕ್ಕಮಟ್ಟಿಗೆ ಹೆಸರು ಮಾಡಿದ್ದರು. ಇಂತಹ ಪ್ರಸಿದ್ಧ ಕಥೆಗಾರರೇಕೆ 'ಜಿಗಣೆ' ಎಂಬ ವಿಚಿತ್ರ ಕಾವ್ಯನಾಮ ಇಟ್ಟುಕೊಂಡಿದ್ದಾರೆಂದು ಒಬ್ಬ ವಿಮರ್ಶಕರು ಪತ್ರಿಕೆಯಲ್ಲಿ ಬರೆಯುತ್ತಾ, 'ಕಥೆಯ ನಾಡಿಯನ್ನು ಒಮ್ಮೆ ಕುಮಾರ್ ಜಿಗಣೆ ಹಿಡಿದಂತೆ ಹಿಡಿದುಬಿಟ್ಟರೆ, ತಮ್ಮ ಕಥೆ ಕಟ್ಟುವ ಸೃಜನಶೀಲತೆಯ ಪರಾಕಾಷ್ಠೆಯನ್ನು ತಲುಪಬಲ್ಲರು. ಹಾಗಾಗಿ ಅವರಿಗೆ ಜಿಗಣೆ ಎಂಬ ಕಾವ್ಯನಾಮ ಬಹಳ ಅನ್ವರ್ಥವಾಗಿದೆ' ಎಂದು ಬರೆದಿದ್ದರು. ಆದರೆ ದುರದೃಷ್ಟವಶಾತ್ ಸತ್ಯ ಬೇರೆಯದೇ ಇತ್ತು. ಕುವೆಂಪು, ಪುತಿನ, ಅಂಬಿಕಾತನಯದತ್ತ ಎಂಬ ರೀತಿಯಲ್ಲಿ ಸುಂದರವಾದ ಕಾವ್ಯನಾಮವನ್ನು ಇಟ್ಟುಕೊಳ್ಳುವುದನ್ನು ಬಿಟ್ಟು ಯಾವ ಲೇಖಕ ತಾನೆ ಜಿಗಣೆ, ಜಿರಲೆ ಎಂಬ ವಿಚಿತ್ರ ಹೆಸರನ್ನು ಇಟ್ಟುಕೊಳ್ಳಬಯಸುತ್ತಾನೆ? 'ಜಿಗಣೆ' ಎಂಬುದು ಇವರ ಹೆಸರಿಗೇರಿದ್ದು ಕೂಡ ಒಂದು ಆಕಸ್ಮಿಕವೇ. ಇವರ ಊರು ಬೆಂಗಳೂರಿನ ಹತ್ತಿರದ ಜಿಗಣಿ. ತಮ್ಮ ಊರನ್ನೇ ಹೆಸರಿನೊಂದಿಗೆ ಸೇರಿಸಿಕೊಂಡು 'ಜಿಗಣಿ ಕುಮಾರ್'